470 (742) ಶ್ರೀಮತಿ ಸುನಿತವೀರಪ್ಪಗೌಡ ಜೆ: (ಬನ್ನೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ಜಿಲ್ಲೆಯಲ್ಲಿ ವಿದ್ಯುತ್ ಪ್ರಸರಣಾ ಉಪ ಕೇಂದ್ರಗಳ ಸ್ಥಾಪನೆಗೆ ಕಳೆದ 2 ವರ್ಷಗಳಲ್ಲಿ ಪ್ರಸ್ತಾಪಿಸಿರುವ ಪ್ರಕರಣಗಳೆಷ್ಟು;

ಆ) ಪ್ರಸ್ತಾಪಿಸಿದ ಆ ಪ್ರಕರಣಗಳಲ್ಲಿ ಈಗಾಗಲೇ ವಿದ್ಯುತ್ ಪ್ರಸರಣಾ ಉಪ ಕೇಂದ್ರ ಸ್ಥಾಪನೆಯಾದ ಸ್ಥಳಗಳಾವುವು;

ಇ) ಪ್ರಸ್ತಾಪಿಸಿರುವುಗಳಲ್ಲಿ ಬಾಕಿ ಇರುವ ಪ್ರಕರಣಗಳಾವುವು; ಇದುವರೆಗೂ ಸ್ಥಾಪಿಸದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಮತ್ತು ಆ) ಕಳೆದ 2 ವರ್ಷಗಳಲ್ಲಿ ಅಂದರೆ 2004–05 ಮತ್ತು 2005–06ರ ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಒಟ್ಟು 13 ವಿದ್ಯುತ್ ಉಪ ಕೇಂದ್ರಗಳ ಸ್ಥಾಪನೆಗೆ ಆಡಳಿತಾತ್ಮಕ ಮಂಜೂರಾತಿ ಆಗಿರುತ್ತದೆ. 2004–05 ರ ವರ್ಷದಲ್ಲಿ 3 ವಿದ್ಯುತ್ ಉಪ ಕೇಂದ್ರಗಳ ಸ್ಥಾಪನೆಗೆ ಮತ್ತು 2005–06ರ ವರ್ಷದಲ್ಲಿ 10 ವಿದ್ಯುತ್ ಉಪ ಕೇಂದ್ರಗಳ ಸ್ಥಾಪನೆಗೆ ಆಡಳಿತಾತ್ಮಕ ಮಂಜೂರಾತಿ ಆಗಿರುತ್ತದೆ. 2004–05 ರ ವರ್ಷದಲ್ಲಿ ಆಡಳಿತಾತ್ಮಕ ಮಂಜೂರಾತಿ ಆಗಿರುವ 3 ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳು ಪ್ರಗತಿಯಲ್ಲಿದೆ. 2005–06 ರ ವರ್ಷದಲ್ಲಿ ಆಡಳಿತಾತ್ಮಕ ಮಂಜೂರಾತಿ ಆಗಿರುವ 10 ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ. ಕಾಮಗಾರಿಗಳು ಪ್ರಗತಿಯಲ್ಲಿರುವ 3 ವಿದ್ಯುತ್ ಉಪ ಕೇಂದ್ರಗಳು ಸ್ಥಾಪನೆಗೊಳ್ಳಲಿರುವ ಸ್ಥಳಗಳ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ಸ್ಥಳ	ವೋಲ್ಟೇಜ್
1.	ಮೈಸೂರು	ಇಲವಾಲ	66 ಕೆ.ವಿ.
2.	ಟಿ. ನರಸೀಪುರ	ತಲಕಾಡು	66.ಕೆ.ವಿ.
3.	ನಂಜನಗೂಡು	ಸುತ್ತೂರು	66.ಕೆ.ವಿ.

ಮೇಲ್ಕಂಡ 3 ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳು ಭರದಿಂದ ಸಾಗುತ್ತಿದ್ದು, ಸೆಪ್ಟೆಂಬರ್ 06 ರ ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಚಾಲನೆಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಇ) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಬಾಕಿ ಇರುವ 10 ವಿದ್ಯುತ್ ಉಪ ಕೇಂದ್ರಗಳ ಸ್ಥಳಗಳು ಮತ್ತು ಇತ್ತೀಚಿನ ವಸ್ತುಸ್ಥಿತಿ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

8 ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳ ನಿರ್ವಹಣೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 2 ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳ ನಿರ್ವಹಣೆಗೆ ಟೆಂಡರ್‌ಗಳನ್ನು ಆಹ್ವಾನಿಸಬೇಕಾಗಿರುತ್ತದೆ. ಈ ಎಲ್ಲಾ 10 ವಿದ್ಯುತ್ ಉಪ ಕೇಂದ್ರಗಳ ಸ್ಥಾಪನೆಗೆ 2005–06 ರ ವರ್ಷದಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುವುದರಿಂದ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಅರ್ಹ ಗುತ್ತಿಗೆದಾರರನ್ನು ಗೊತ್ತುಪಡಿಸಲು ಕಾಲಾವಕಾಶ ಅವಶ್ಯಕತೆ ಇರುತ್ತದೆ. ಟೆಂಡರ್‌ಗಳನ್ನು

ಆಹ್ವಾನಿಸಲಾಗಿರುವ 8 ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳನ್ನು ಪ್ರಸಕ್ತ ವರ್ಷವಾದ 2006–07 ರ ಅಂತ್ಯದೊಳಗೆ ಪೂರ್ಣಗೊಳಿಸಿ, ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

ಟೆಂಡರ್‌ಗಳನ್ನು ಆಹ್ವಾನಿಸಬೇಕಾಗಿರುವ 2 ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳನ್ನು ಮುಂದಿನ ವರ್ಷ ಅಂದರೆ 2007–08ರ ಅಂತ್ಯದ ವೇಳೆಗೆ ಪೂರ್ಣಗೊಳಿಸಿ, ಚಾಲನೆಗೊಳಿಸಲು ಸಾಧ್ಯವಾಗುತ್ತದೆ.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀಮತಿ ಸುನಿತ ವೀರಪ್ಪಗೌಡ ಜೆ. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 742ಕ್ಕೆ ಅನುಬಂಧ.

ಮೈಸೂರು ಜಿಲ್ಲೆಯಲ್ಲಿ 2005–06 ರ ವರ್ಷದಲ್ಲಿ ಆಡಳಿತಾತ್ಮಕ ಮಂಜೂರಾತಿ ಆಗಿದ್ದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿರುವ ವಿದ್ಯುತ್ ಉಪ ಕೇಂದ್ರಗಳ ಸ್ಥಳಗಳು ಮತ್ತು ಇತ್ತೀಚಿನ ವಸ್ತುಸ್ಥಿತಿ ವಿವರಗಳು

ಕ್ರ. ಸಂ.	ತಾಲ್ಲೂಕು	ಸ್ಥಳ	ವೋಲ್ಟೇಜ್	ಇತ್ತೀಚಿನ ವಸ್ತುಸ್ಥಿತಿ ವಿವರಗಳು
1	ಕೆ.ಆರ್.ನಗರ	ಚುಂಚನಕಟ್ಟೆ	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
2	ಕೆ.ಆರ್.ನಗರ	ಭೇರ್ಯ	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
3	ಕೆ.ಆರ್.ನಗರ	ಹರದನಹಳ್ಳಿ ಅಗ್ರಹಾರ	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
4	ಕೆ.ಆರ್.ನಗರ	ಮಿರ್ಲೆ	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
5	ಹೆಚ್.ಡಿ.ಕೋಟೆ	ಹಂಪಾಪುರ	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
6	ಪಿರಿಯಾಪಟ್ಟಣ	ರಾವಂದೂರು	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
7	ಹುಣಸೂರು	ಹನಗೋಡು	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
8	ಹುಣಸೂರು	ಗೆಜ್ಜೆಯ್ಯನ ವಡ್ಡರ ಗುಡಿ	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
9	ಪಿರಿಯಾ ಪಟ್ಟಣ	ಬೈಲಕುಪ್ಪೆ	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಬೇಕಾಗಿರುತ್ತದೆ.
10	ಟಿ. ನರಸೀಪುರ	ಮೂಗೂರು	66 ಕೆ.ವಿ.	ಟೆಂಡರ್‌ಗಳನ್ನು ಆಹ್ವಾನಿಸಬೇಕಾಗಿರುತ್ತದೆ.